309

1295

ಮೈಸೂರ ಗೆಜಿಟ್.

ನಂ. 39.] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟು ತಾ|| 18, ಸ್ ೧೯೦೪.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗ್ಯೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮಿಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರಫ್.

ಸ್ ೧೯೦೪ನೆ ಇಸವಿ ಆಗಸ್ಟು 5ನೆ ತಾರೀಖಿನ ರೂಲ್ ಆಫ್ ಪ್ರಾಕ್ಟೀಸ್ ನಂಬರು 73.

ಕ್ರಿ. ಪ್ರೊ. ಕೋ. 553ನೆ ಸೆಕ್ಷನ್ ರೀತ್ಯಾ ಚೀಫ್ ಕೋರ್ಟಿನವರು, ಗವರ್ನ್‌ಮೆಂಟಿನವರ ಪ್ಪಿಕೆಯಿಂದ ಈ ಕೆಳಗೆ ನಮೂದಿಸಿರುವ ರೂಲ್ ಅನ್ನು ವಿಸ್ತರಿಸಿದಾರೆ:—

ಒಬ್ಬ ಪ್ರೈವೇಟ್ ಆಸಾಮಿಯು (Private person,) ಸಿವಲ್ ವ ಕ್ರಿಮಿನಲ್ ಪ್ರೊಸೀಡಿಂಗ್ಸು ಅಥವಾ ಇನ್ಯಾವ ವಿಷಯು ಕ್ಕಾಗಲೀ, ಗವರ್ನ್‌ಮೆಂಟು, ಮ್ಯುನಿಸಿಪಲ್ ಅಥವಾ ಲೋಕಲ್ ಫಂಡು ಸರ್ವಿಸ್ಸಿನಲ್ಲಿರುವ ಒಬ್ಬ ಮೆಡಿಕಲ್ ಆಫಿಸರಿಂದ ಸರ್ಟಿಫಿಕೇಟು, ಅಥವಾ ಅವರ ಅಭಿಪ್ರಾಯು ಅಥವಾ ಸಾಕ್ಷ್ಯತ್ವವನ್ನು ಕೊಡಬೇಕೆಂದು ಅಪೇಕ್ಷಿಸಿದ ಪಕ್ಷದಲ್ಲಿ, ಸದರೀ ಮೆಡಿಕಲ್ ಆಫಿಸರಿಗೆ ಅವರ ಆಲೋವೆನಸ್ಸು ವಿನಹಾ ಅವರಿಗೆ ಸಲ್ಲುವ ಎರಡು ದಿವಸಗಳ ತಲುಬಿಗೆ ಹೆಚ್ಚ್ಕರದಂತೆ ಮತ್ತು ೫ ರೂಪಾಯಿಗಳಿಗೆ ಮೀರದೆ ಫೀಜು ಕೊಡ ಬೇಕೆಂತಲೂ ಮತ್ತು ಸದರಿ ಆಸಾಮಿಯು ಸರ್ಕಾರಿ ಅಥವಾ ಮ್ಯುನಿಸಿಪಲ್ ಅಥವಾ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಇಲಾಜು ಹೊಂದಿದ ಮಾತ್ರದಿಂದಲೆ ಮೇಲ್ಕಂಡ ರುಸುಂನಿಂದ ವಿನಾಯತಿ ಹೊಂದಲು ಅರ್ಹನಲ್ಲವೆಂತಲೂ, ಗವರ್ನ್‌ಮೆಂಟಿನವರು ಸ್ ೧೯೦೪ನೆ ಫೆಬ್ರುವರಿ 11ನೆ ಮುರ್ಕುಮ್ಮಿನ 3989 – 4038ನೆ ಪ್ರೊಸೀಡಿಂಗ್ಸನ್ನು ಮಾಡಿರುತ್ತಾರಾಗಿ, ಒಬ್ಬ ಪ್ರೈವೇಟ್ ಆಸಾಮಿ ಯು ಅಪೇಕ್ಷೆ ಮೇಲೆ, ಕ್ರಿಮಿನಲ್ ಕೋರ್ಟಿನವರು ಒಬ್ಬ ಮೆಡಿಕಲ್ ಆಫಿಸರ ಸರ್ಟಿಫಿಕೇಟ್ ಅಥವಾ ಅಭಿಪ್ರಾಯವನ್ನ ಅಪೇಕ್ಷಿಸಿದಾಗ ಅಥವಾ ಸಾಕ್ಷ್ಯತ್ವವನ್ನು ಕೊಡುವದಕ್ಕೆ ಅವರನ್ನು ಸಮ್ಮ ಮೂಲಕ ಕರದಾಗ, ಅಂಥಾ ಆಸಾಮಿಯು, ತತ್ಪೂರ್ವದಲ್ಲಿಯೇ ಅವಶ್ಯಕ ವಾದ ಫೀಜನ್ನು ನಗದು ಡಿಪಾಜಿಟ್ ಇಡುವಹಾಗೆ ಹುಕುಂ ಮಾಡಬೇಕೆಂತಲೂ ಮತ್ತು ಈ ವೊಬಲಗನ್ನು ಮೆಡಿಕಲ್ ಆಫಿಸರಿಗೆ, ಅವರು ಸರ್ಟಿಫಿಕೇಟ್, ಅಭಿಪ್ರಾಯ ಅಥವಾ ಸಾಕ್ಷ್ಯವನ್ನು ಕೊಟ್ಟನಂತರ, ಪಾವತಿ ಮಾಡುವಹಾಗ ಹುಕುಂ ಮಾಡಬೇಕೆಂತಲೂ, ಚೀಫ್ ಕೋರ್ಟಿನವರು ಆಜ್ಞಾಪಿಸಿದ್ದಾರೆ.

ತಮ್ಮ ವಿಧೇಯ,

ವಿ. ಎ. ರಾಜರತ್ನ ಮೊದಲಿಯಾರ್, ರಿಜಿಸ್ಟ್ರಾರ್.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. I. ತಾರೀಖು 29ನೆ ಜುಲೈ 1904.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ನಂಜನಗೂಡು ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು 156 ಫೈನಲ್ ಟೈಟಲ್ ಡೀಡ್‌ಯಾನೆ ಖಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರರು ಐಜ್ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೆ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತ.

ಜೆ. ಪಿ. ಗ್ಯಾಟ್,

ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್.